## ಚುಟುಕು ಸುದ್ದಿ

### ಇನ್ನೂ ದೊರೆಯದ ನಾಪತ್ತೆಯಾದವರ ವಿವರ

**ಮೈಸೂರು:** ಕೇರಳದ ವೈನಾಡಿನಲ್ಲಿ ಸಂಭವಿಸಿದ ಗುಡ್ಡ ಕುಸಿತದ ಪ್ರಕರಣದಲ್ಲಿ ಜಿಲ್ಲೆಯ ಮೂವರು ಸಾವಿಗೀಡಾಗಿ, ಇತರೆ ಒಂಭತ್ತು ಮಂದಿ ನಾಪತ್ತೆಯಾಗಿರುವ ವರದಿಯಾಗಿದೆ.

ಟಿ. ನರಸೀಪುರ ತಾಲೂಕಿನ ಉಕ್ಕಲಗೆರೆ ಗ್ರಾಮದ ಸಾವಿತ್ರಿ, ಅಚ್ಚು, ಶ್ರೀಪುಟ್ಟಿ ಸಾವನ್ನಪಿದ್ದಾರೆ ಎನ್ನುವುದು ಬಹುತೇಕ ಖಚಿತವಾಗುತ್ತಿದೆ. ಗುರುಮಲ್ಲ, ಶಿವಣ್ಣ, ಸಾವಿತ್ರಿ, ಅಪ್ಪಣ್ಣ, ಸವಿತಾ ಇನ್ನಿತರರು ಮೊದಲಾದವರು ನಾಪತ್ತೆಯಾಗಿದ್ದಾರೆ.

ಇವರು ಕಳೆದ 40 ವರ್ಷಗಳಿಂದ ಕೇರಳದ ವೈನಾಡು ಪ್ರದೇಶದ ಗ್ರಾಮವೊಂದರಲ್ಲಿ ವಾಸವಾಗಿದ್ದರು. ಇವರ ಕುಟುಂಬದ ಓರ್ವರು ನಿರಾಶ್ರಿತರ ಶಿಬಿರದಲ್ಲಿ ಆಶ್ರಯ ಪಡೆದಿದ್ದು ಉಳಿದಂತೆ ಕಾರ್ಯಾಚರಣೆ ನಡೆದಿದೆ. ಉಕ್ಕಲಗೆರೆ ಗ್ರಾಮಕ್ಕೆ ತಹಸಿಲ್ದಾರ್ ಹಾಗೂ ಇನ್ನಿತರರು ಭೇಟಿ ನೀಡಿ, ಮೃತರ ಸಂಬಂಧಿಕರಿಂದ ಹೆಚ್ಚಿನ ಮಾಹಿತಿ ಕಲೆಹಾಕುತ್ತಿದ್ದಾರೆ.

### ಉದ್ಯೋಗ ಮೇಳ ನಾಳೆ

**ಮೈಸೂರು:** ಸಮರ್ಥನಂ ಅಂಗವಿಕಲರ ಸಂಸ್ಥೆ ಹಾಗೂ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು ಸಂಯುಕ್ತಾಶ್ರಯದಲ್ಲಿ ಆ. ಮೂರರ ಬೆಳಗ್ಗೆ ಒಂಭತ್ತರಿಂದ ಮಧ್ಯಾಹ್ನ ಎರಡರವರೆಗೆ ಕಾಲೇಜಿನಲ್ಲಿ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಕೇಂದ್ರೀಯ ಮುಖ್ಯಸ್ಥ ಪಿ.ವಿ. ಸುಭಾಷ್‌ಚಂದ್ರ ತಿಳಿಸಿದರು.

ಸುದ್ದಿಗಾರರೊಡನೆ ಮಾತನಾಡಿ, ಈ ಉದ್ಯೋಗ ಮೇಳಕ್ಕೆಂದು 25 ಕ್ಕು ಹೆಚ್ಚು ಕಂಪನಿಗಳು ನೋಂದಾಯಿಸಿಕೊಂಡಿವೆ. ಅಲ್ಲದೆ, ಸುಮಾರು ಸಾವಿರದಿಂದ 1500 ಮಂದಿ ಉದ್ಯೋಗಾಕಾಂಕ್ಷಿಗಳು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಇಲ್ಲಿ ಎಸ್‌ಎಸ್‌ಎಲ್‌ಸಿಯಿಂದ ಹಿಡಿದು ಇನ್ನಿತರ ಶಿಕ್ಷಣ ಪಡೆದ ಯುವಕ, ಯುವತಿಯರು ಹಾಗೂ ವಿಶೇಷ ಚೇತನರು ಸಹಾ ಪಾಲ್ಗೊಳ್ಳಬಹುದಾಗಿದೆ. ಆಕಾಂಕ್ಷಿಗಳು ತಮ್ಮ ಅಗತ್ಯ ದಾಖಲಾತಿ ಭಾವಚಿತ್ರಗಳ ಐದು ಸೆಟ್ ತರಬೇಕು ಎಂದು ಸಲಹೆ ನೀಡಿದರು.

ಜೊತೆಗೆ ಹೆಚ್ಚಿನ ಮಾಹಿತಿಗೆ ದೂ. 96201 69867 ನ್ನು ಸಂಪರ್ಕಿಸಬಹುದಾಗಿದೆ ಎಂದು ತಿಳಿಸಿದರು. ಡಾ. ಮಂಜುನಾಥ್, ವೀರಭದ್ರಪ್ಪ ಹಾಗೂ ಎಂ. ಶಿವರಾಜು ಹಾಜರಿದ್ದರು.

### ಕಲಾಕೃತಿಗಳ ಪ್ರದರ್ಶನ

**ಮೈಸೂರು:** ನಗರದ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು (ಕಾವಾ)ದ ಅಂತಿಮ ವರ್ಷದ ವಿದ್ಯಾರ್ಥಿಗಳಲ್ಲಿನ ಎಂಟು ಮಂದಿ ಒಟ್ಟುಗೂಡಿ ಬರುವ ಆಗಸ್ಟ್ ಎರಡರಿಂದ ನಾಲ್ಕವರೆಗೆ ನಗರದ ಮಾಲ್ ಆಫ್ ಮೈಸೂರಿನಲ್ಲಿ ತಾವೇ ಸೃಷ್ಟಿಸಿದ ವೈವಿಧ್ಯಮಯ ಕಲಾಕೃತಿಗಳ ಪ್ರದರ್ಶನ ಆಯೋಜಿಸಿದ್ದಾರೆಂದು ಪೈಂಟಿಂಗ್ ವಿಭಾಗದ ಕಾವ್ಯ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಈ ಪ್ರದರ್ಶನದಲ್ಲಿ ಗ್ರಾಫಿಕ್, ಅಚ್ಚುಕಲೆ, ಶಿಲ್ಪಕಲೆ, ಫೋಟೋಗ್ರಫಿ ಮೊದಲಾದವು ಇರಲಿವೆ. ಆಸಕ್ತರು ತಮ್ಮ ಸೃಷ್ಟಿಯನ್ನು ನೋಡಿ ಉತ್ತೇಜಿಸುವ ಉದ್ದೇಶದಿಂದ ಈ ಪ್ರದರ್ಶನ ಆಯೋಜಿಸಲಾಗಿದೆ. ನಿತ್ಯ ಬೆಳಗ್ಗೆ 10 ರಿಂದ ರಾತ್ರಿ 7.30 ರವರೆಗೆ ಉಚಿತ ಪ್ರವೇಶವಿದೆ. ಪ್ರದರ್ಶನದ ಜೊತೆಗೆ ನಿತ್ಯ ಸಂಜೆ ಸಂಗೀತ ಕಾರ್ಯಕ್ರಮವೂ ಇರಲಿದೆ ಎಂದರು. ಇನ್ನಿತರ ಹಿರಿಯ ವಿದ್ಯಾರ್ಥಿಗಳಾದ ಧ್ರುವರಾಜ್, ಆದರ್ಶ್, ಜ್ಯೋತಿಕಾ ಬೈಜು, ಯದುನಂದನ್ ಇದ್ದರು.

■ ಸಂಗಮ ಪ್ರದೇಶದಲ್ಲಿ ಉಕ್ಕಿ ಹರಿಯುತ್ತಿರುವ ಕಾವೇರಿ ಮತ್ತು ಕಬಿನಿ ■ ಎತ್ತ ನೋಡಿದರೂ ನೀರೋ ನೀರು ■

# ನರಸೀಪುರದ ಸುತ್ತಲೂ ನದಿ ನೀರಿನ ಅಬ್ಬರ

**ಸಂ.ಕ. ಸಮಾಚಾರ ಟಿ. ನರಸೀಪುರ**

ಕಾವೇರಿ ಮತ್ತು ಕಬಿನಿ ನದಿಗಳ ಸಂಗಮ ಸ್ಥಳವಾಗಿರುವ ಟಿ. ನರಸೀಪುರವನ್ನು ಪ್ರವಾಹದ ಭೀತಿ ಆವರಿಸಿದೆ. ಭಾರಿ ಪ್ರಮಾಣದಲ್ಲಿ ನೀರು ನದಿಗಳಲ್ಲಿ ಹರಿಯುತ್ತಿರುವುದರಿಂದ ಅನಿಯಂತ್ರಿತ ವಾತಾವರಣ ಯವುದೇ ಸಮಯ ಎದುರಾಗಬಹುದಾದ ಆತಂಕ ಎದುರಾಗಿದೆ.

ಎರಡೂ ನದಿಗಳ ಉಗಮ ಸ್ಥಾನದಲ್ಲಿ ಭಾರೀ ಪ್ರಮಾಣದ ಮಳೆಯಾಗುತ್ತಿರುವುದು ಮತ್ತು ಎರಡೂ ಕಡೆ ಜಲಾಶಯಗಳಿಂದ ಸುಮಾರು 2.5ಲಕ್ಷ ಕ್ಯೂಸೆಕ್ ಮೀರುವ ಪ್ರಮಾಣದಲ್ಲಿ ಹೊರಹರಿವು ಬಿಡುತ್ತಿರುವುದರಿಂದ ಸಂಗಮ ಸ್ಥಳ ಸಂಪೂರ್ಣ ಆವೃತ್ತವಾಗಿದ್ದು ಜನವಸತಿಯತ್ತ ನೀರು ನುಗ್ಗುತ್ತಿದ್ದರೂ ಹೆಚ್ಚಿನ ತೊಂದರೆಯಾಗಿಲ್ಲ. ನದಿ ಪಾತ್ರದ ಜನರನ್ನು ತಾಲೂಕು ಆಡಳಿತ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿ ಕಾಳಜಿ ಕೇಂದ್ರದಲ್ಲಿ ಇರಿಸಿದೆ.

**ಸದ್ಯಕ್ಕೆ ಅನಾಹುತವಿಲ್ಲ**

ಪಟ್ಟಣದ ಅಗಸ್ತ್ಯೇಶ್ವರ ದೇವಾಲಯ, ರಾಘವೇಂದ್ರ ಮಠದ ಬಳಿಗೂ ನೀರು ಬಂದಿದೆ. ತುಂಬಿ ಹರಿಯುತ್ತಿರುವ ನದಿಗಳತ್ತ ಹೋಗದಂತೆ ತಾಲ್ಲೂಕು ಆಡಳಿತ ತಡೆ ನಿರ್ಮಿಸಿದೆ.

**ಬೆಳೆ ಹಾನಿಯಾಗಿದೆ**

ತಾಲ್ಲೂಕಿನ ತಡಿ ಮಾಲಂಗಿ ಗ್ರಾಮದ 27 ಕುಟುಂಬಗಳನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಹಲವು ಮನೆಗಳಿಗೆ ನೀರು ಕೂಡ ನುಗ್ಗಿದ್ದರೂ ಆಸ್ತಿ ಪಾಸ್ತಿ ಹಾನಿಯಾಗಿಲ್ಲ. ತಾಲ್ಲೂಕಿನ ಸೋಸಲೆ, ತಲಕಾಡು ಭಾಗಗಳಲ್ಲಿ ಕಸಬಾದ ಕಿರಗಸೂರು, ಹುಣಸೂರು ಭಾಗಗಳಲ್ಲಿ ಹೆಸರು, ಉದ್ದು, ಹಲಸಂದೆ ಹಾಗೂ ಭತ್ತದ ಭೂಮಿಗೆ ಹೆಚ್ಚು ನೀರು ನುಗ್ಗಿರುವುದರಿಂದ ಬೆಳೆ ಹಾನಿಯಾಗಿದೆ.

■ ಸುರೇಶ್ ಆಚಾರ್ | ತಹಸೀಲ್ದಾರ್

**ಗ್ರಾಮಾಂತರದಲ್ಲಿ ಕಟ್ಟೆಚ್ಚರ**

ಕಾವೇರಿ ಹರಿಯುವ ತಲಕಾಡು ಸೇರಿದಂತೆ ಹೋಬಳಿಯ ನದಿ ಪಾತ್ರದ ಗ್ರಾಮಗಳಾದ ಮಡವಾಡಿ, ಮೇದನಿ, ಕಾವೇರಿಪುರ, ಕಾಳಿಹುಂಡಿ, ಗ್ರಾಮಗಳಲ್ಲೂ ನದಿ ನೀರು ಹೆಚ್ಚಳದಿಂದ ಹೆಚ್ಚೇನೂ ತೊಂದರೆಯಾದಂತಿಲ್ಲ. ಸದ್ಯ ಮಾಲಂಗಿ ಗ್ರಾಮದಲ್ಲಿ ನೀರು ಸುತ್ತುವರಿದು ರಾಮಮಂದಿರವನ್ನು ಆವರಿಸಿಕೊಂಡಿದೆ. ಜನರು ರಾಮ ಮಂದಿರದ ಬಳಿ ಕುಳಿತು ನದಿಯ ನೀರನ್ನು ವೀಕ್ಷಿಸುತ್ತಿದ್ದಾರೆ. ಅಗತ್ಯಬಿದ್ದರೆ ಸ್ಥಳಾಂತರಕ್ಕೆ ಅನುವಾಗುವಂತೆ ತಾಲ್ಲೂಕು ಮತ್ತು ಜಿಲ್ಲಾಡಳಿತ ವ್ಯವಸ್ಥೆ ಮಾಡಿಕೊಂಡಿವೆ.

ಸದ್ಯ ಗುಂಜಾನರಸಿಂಹ ಸ್ವಾಮಿ ಸೋಪಾನ ಕಟ್ಟೆಗಳು ಸಂಪೂರ್ಣ ಮುಳುಗಿದ್ದರೂ ನೀರು ರಸ್ತೆಗೆ ಬಂದಿಲ್ಲವಾದ್ದರಿಂದ ಸಂಚಾರಕ್ಕೆ ಯಾವುದೇ ತೊಂದರೆ ಆಗಿಲ್ಲ. ಪಿಟೀಲು ಚೌಡಯ್ಯ ವೃತ್ತದ ಬಳಿ ಮೂರು ಅಡಿಗಳಷ್ಟು ನೀರು ನಿಂತಿದೆ. ಹೀಗಾಗಿ ಆಟೋಗಳು ಸಂಚರಿಸುತ್ತಿರಲಿಲ್ಲ. ಉಳಿದಂತೆ ದ್ವಿಚಕ್ರ, ನಾಲ್ಕು ಚಕ್ರ ವಾಹನಗಳು ಸೇರಿದಂತೆ ಎಲ್ಲಾ ಮಾದರಿಯ ವಾಹನಗಳು ನೀರನ್ನು ಹಾದೇ ಸಂಚರಿಸುತ್ತಿವೆ. ಇನ್ನು ನದಿ ಬಳಿಯ ಖಾಸಗಿ ಕಲ್ಯಾಣ ಮಂಟಪದ ಕಾಂಪೌಂಡ್ ಸುತ್ತಲೂ ನೀರು ನಿಂತಿದೆ. ಸದ್ಯ ಪಟ್ಟಣ ವ್ಯಾಪ್ತಿಯ ನದಿಯ ತಗ್ಗು ಪ್ರದೇಶಗಳಲ್ಲಿ ಹೆಚ್ಚಿನ ಜನರು ವಾಸವಿಲ್ಲದ ಕಾರಣ ಅನಾಹುತಗಳು ಸಂಭವಿಸುವ ಸಾಧ್ಯತೆ ಕಡಿಮೆ.

**ಜನವಸತಿಗಳತ್ತ ಪ್ರವಾಹ ಹೆಚ್ಚಳದ ಭೀತಿ**

ನರಸೀಪುರ ಪಟ್ಟಣಕ್ಕೆ ನುಗ್ಗಿರುವ ಕಾವೇರಿ ಕಬಿನಿ ಪ್ರವಾಹದ ನೀರು ನಿವಾಸಿಗಳಲ್ಲಿ ಆತಂಕ ಸೃಷ್ಟಿಸಿದೆ.

## ಹಣವುಳ್ಳ ಅನರ್ಹರಿಗೆ ಕುಲಪತಿ ಹುದ್ದೆ

ಕರ್ನಾಟಕರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಎ. ರಂಗಸ್ವಾಮಿ ಮತ್ತು ಶ್ರೀಮತಿ ಪ್ರಭಾ ರಂಗಸ್ವಾಮಿರವರನ್ನು ಮಾಜಿ ಶಾಸಕರಾದ ಎ.ಟಿ. ರಾಮಸ್ವಾಮಿ ಸನ್ಮಾನಿಸಿ ಗೌರವಿಸಿದರು.

**ಸಂ.ಕ.ಸಮಾಚಾರ, ಮೈಸೂರು**

ಮೈಸೂರಿನ ಕರ್ನಾಟಕರಾಜ್ಯ ಮುಕ್ತವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಎ. ರಂಗಸ್ವಾಮಿ ಅವರ ಅಭಿನಂದನಾ ಸಮಾರಂಭ ಮತ್ತು ಅಭಿವರ್ಧನ ಅಭಿನಂದನಾ ಗ್ರಂಥ ಬಿಡುಗಡೆ ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಈಚೆಗೆ ಜರುಗಿತು.

ಮಾಜಿ ಶಾಸಕರಾದ ಎ.ಟಿ. ರಾಮಸ್ವಾಮಿ ಮಾತನಾಡಿ ಪ್ರಸ್ತುತ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯಗಳಲ್ಲಿ ಕುಲಪತಿಗಳನ್ನು ಆಯ್ಕೆ ಮಾಡುವಾಗ ವಿದ್ವತ್ತು ಮತ್ತು ಅನುಭವ, ಪ್ರಾಮಾಣಿಕ ಸೇವೆಯ ಇಚ್ಛೆ ಇತ್ಯಾದಿ ಪ್ರಮುಖ ಗುಣಗಳನ್ನು ನಿರ್ಲಕ್ಷಿಸಿ ಹಣ ಮತ್ತು ಪ್ರಭಾವಕ್ಕೆ ಮಣೆ ಹಾಕಲಾಗುತ್ತಿದೆ. ಅನರ್ಹರು ದೊಡ್ಡ ಹುದ್ದೆ ಪಡೆಯುತ್ತಿರುವುದು ವಿಷಾದದ ಸಂಗತಿ ಎಂದರು.

ಹಿಂದೆ ಕುವೆಂಪು, ಹೆಚ್. ನರಸಿಂಹಯ್ಯ, ಪಾವಟೆ, ಪ್ರೊ. ನಂಜುಂಡಪ್ಪ ಇಂತವರು ವಿದ್ವಾಂಸರೂ ಆಗಿದ್ದರೂ, ಕುಲಪತಿಯ ಸ್ಥಾನಕ್ಕೆ ಅರ್ಹ ವ್ಯಕ್ತಿಗಳಾಗಿ ಆ ಸ್ಥಾನಕ್ಕೆ ಘನತೆ ತಂದಿದ್ದರು. ಇಂದು ಇಂತಹ ಸ್ಥಿತಿ ಇಲ್ಲವಾಗಿದೆ ಎಂದರು. ಇದೇ ಸಮಯ ಪ್ರೊ. ರಂಗಸ್ವಾಮಿ ತಮ್ಮ ಸೇವಾವಧಿಯಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಇವರು ದೊಡ್ಡ ಹುದ್ದೆಗೆ ಅರ್ಹರಾಗಿದ್ದರು ಎಂದು ಗುರುತಿಸಿ ಮೆಚ್ಚುಗೆ ವ್ಯಕ್ತಮಾಡಿದರು.

**ಪ್ರೊ. ರಂಗಸ್ವಾಮಿ ದಂಪತಿಗೆ ಅಭಿನಂದನೆ**

ಕಾರ್ಯಕ್ರಮದಲ್ಲಿ ಅಭಿವರ್ಧನ ಅಭಿನಂದನಾ ಗ್ರಂಥ ಬಿಡುಗಡೆ ಮಾಡಲಾಯಿತು. ಕೃತಿ ಕುರಿತು ಕುವೆಂಪುನಗರದ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಡಾ.ಪಿ. ಬೆಟ್ಟೇಗೌಡ ಮಾತನಾಡಿ, ಗ್ರಂಥದ ಬಗ್ಗೆ ಮೆಚ್ಚುಗೆ ವ್ಯಕ್ತಮಾಡಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಸುಧಾರಾವ್, ಪ್ರೊ. ರಾಮೇಗೌಡ, ಪರಿಷತ್‌ನ ಮಾಜಿ ಸದಸ್ಯ ಡಿ. ಮಾದೇಗೌಡ ಮತ್ತಿತರ ಪ್ರಮುಖರು ಇದ್ದರು. ಕಾರ್ಯಕ್ರಮದ ಕೇಂದ್ರ ಬಿಂದು ಪ್ರೊ. ರಂಗಸ್ವಾಮಿ ಮತ್ತು ಪ್ರಭಾ ರಂಗಸ್ವಾಮಿ ಅವರನ್ನು ಗೌರವಿಸಲಾಯಿತು.

ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ಜಯಪ್ರಕಾಶ್‌ಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಮಾನಸ, ಅಭಿನಂದನಾ ಗ್ರಂಥದ ಸಂಪಾದಕರಾದ ಡಾ.ನೀ. ಗೂ. ರಮೇಶ್, ಡಾ. ಮೈಸೂರು ಉಮೇಶ್, ಕೆಂಪಮ್ಮ ಕಾರ್ಕಳ್ಳಿ, ಅಂಬಳೆ ಮಹಾದೇವಸ್ವಾಮಿ, ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ತವರಿಗೆ ಕಾರ್ಮಿಕರು ವಾಪಸು

**ಚಾಮರಾಜನಗರ:** ಭೂಕುಸಿತ ಘಟನೆಯಲ್ಲಿ ರಕ್ಷಣೆ ಮಾಡಲಾಗಿರುವ ಚಾಮರಾಜನಗರ ಜಿಲ್ಲೆಯ ಮೂಲದ ಕೂಲಿ ಕಾರ್ಮಿರನ್ನು ಕೇರಳದ ವೈನಾಡು ಭಾಗದಿಂದ ಗುಂಡ್ಲುಪೇಟೆ ಗಡಿ ಮೂಲಕ ಜಿಲ್ಲೆಗೆ ವಾಪಸು ಕರೆತರಲಾಗುತ್ತಿದೆ.

ಮೃತ ರಾಜೇಂದ್ರ

ಸದ್ಯ ವೈನಾಡಿನ ಸೇಂಟ್ ಜೋಸೆಫ್ ಶಾಲೆ ಹಾಗೂ ಮೇಪ್ಪಾಡಿಯ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ತೆರೆಯಲಾಗಿರುವ ಕಾಳಜಿ ಕೇಂದ್ರದಲ್ಲಿ ಇನ್ನೂ ಹಲವರು ಇದ್ದು ಇವರನ್ನೆಲ್ಲಾ ವಾಪಸು ಕರೆದುಕೊಂಡು ಬರಲು ಜಿಲ್ಲಾಡಳಿತ ಕ್ರಮವಹಿಸುತ್ತಿದೆ.

ಸದ್ಯ ತ್ರಿಯಂಬಕಪುರದ ಸ್ವಾಮಿಯನ್ನು ಅವರ ಮನೆಗೆ ಕಳುಹಿಸಲಾಗಿದೆ. ಗುರುವಾರ 10 ಮಂದಿಯನ್ನು ಕರೆತರಲಾಗಿದೆ. ಜಿಲ್ಲೆಯಿಂದ ಕೇರಳದ ಟೀ ಎಸ್ಟೇಟ್‌ಗಳಿಗೆ ಕೂಲಿ ಕೆಲಸಕ್ಕೆ ತೆರಳಿ ಹಲವು ವರ್ಷಗಳಿಂದ ಅಲ್ಲಿ ದುಡಿಯುತ್ತಿರುವವರು ಇಷ್ಟು ವರ್ಷ ತಾವು ದುಡಿದ ಎಲ್ಲಾ ಹಣ, ಮನೆ ಇತ್ಯಾದಿ ಸಂಪತ್ತು ಕಳೆದುಕೊಂಡು ಈಗ ಬರಿಗೈನಲ್ಲಿ ಊರಿಗೆ ಬರುವಂತಾಗಿದೆ.

**ಸಾವೀಗೀಡಾದ ರಾಜೇಂದ್ರ ಅಂತ್ಯಕ್ರಿಯೆ**

**ಒಂದು ಶವ ಪತ್ತೆ**

ಈ ನಡುವೆ, ವಯನಾಡಿನ ಚೂರಲ್‌ಮಲಾದಲ್ಲಿ ನೀರಿನಲ್ಲಿ ಕೊಚ್ಚಿಹೋಗಿದ್ದ ಚಾಮರಾಜನಗರ ಮೂಲದ ರಾಜೇಂದ್ರ(50) ಅವರ ಶವ ಕೇರಳದ ಕೊಯಿಕ್ಕೂಡು ಸಮೀಪದ ನೆಲಂಬೂರಿನಲ್ಲಿ ಬುಧವಾರ ರಾತ್ರಿ ಪತ್ತೆಯಾಗಿದೆ.

ಅವರ ಪತ್ನಿ ರತ್ನಮ್ಮ ಸಹ ಮೃತಪಟ್ಟಿದ್ದಾರೆಂದು ಹೇಳಲಾಗಿದ್ದು, ಅವರ ಶವ ಇನ್ನೂ ಸಿಕ್ಕಿಲ್ಲ. ರಾಜೇಂದ್ರ ಅವರ ಪತ್ನಿ ಚಾಮರಾಜನಗರ ತಾಲೂಕಿನ ಇರಸವಾಡಿಯವರು.

ಕೇರಳದಿಂದ ಊರಿಗೆ ಮರಳುತ್ತಿರುವ ಕೂಲಿ ಕಾರ್ಮಿಕರ ತಂಡ

ರಾಜೇಂದ್ರ ಆರು ತಿಂಗಳ ಹಿಂದಷ್ಟೇ ಕಟ್ಟಿಸಿ ಗೃಹಪ್ರವೇಶ ಮಾಡಿದ್ದ ಮನೆ ಸಹ ಪ್ರವಾಹದಲ್ಲಿ ಕೊಚ್ಚಿಹೋಗಿದೆ. ರಾಜೇಂದ್ರ ಶವದ ಅಂತ್ಯಕ್ರಿಯೆ ಮೇಪ್ಪಾಡಿಯಲ್ಲಿ ನಡೆದಿದೆ ಎಂದು ಇವರ ಬಂಧು ವೆಂಕಟಯ್ಯನಛತ್ರ ಗ್ರಾಮ ಪಂಚಾಯಿತಿ ಸದಸ್ಯ ಶಶಿಕುಮಾರ್ ತಿಳಿಸಿದರು.

### ಪದವೀಧರ ದಿನಾಚರಣೆ ನಾಳೆ

**ಮೈಸೂರು:** ಗೋಕುಲಂ ಮೂರನೇ ಹಂತದ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಿನ ಪದವೀಧರ ದಿನಾಚರಣೆ ಆ. 3ರಂದು ಬೆಳಗ್ಗೆ 10ಕ್ಕೆ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ ಎಂದು ಪ್ರಾಚಾರ್ಯ ಡಾ.ಬಿ. ಸದಾಶಿವೇಗೌಡ ತಿಳಿಸಿದರು. ಸುದ್ದಿಗಾರರೊಡನೆ ಮಾತನಾಡಿ, ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಅತಿಥಿಗಳಾಗಿರುವರು. ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಗುಂಡಪ್ಪಗೌಡ ಅಧ್ಯಕ್ಷತೆ ವಹಿಸುವರು. ಬಿ. ಶಿವಲಿಂಗಪ್ಪ, ಪಿ. ವಿಶ್ವನಾಥ್ ಉಪಸ್ಥಿತರಿರುತ್ತಾರೆ ಎಂದರು. 812 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಗುವುದು. 58 ಪ್ರತಿಭಾನ್ವಿತ ವಿದ್ಯಾರ್ಥಿಗಳು ರ್‍ಯಾಂಕ್ ಪಡೆದಿದ್ದಾರೆ. ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್‌ನ ಎಸ್. ಶ್ರೀನಿಧಿ ಕಾಲೇಜಿಗೇ ಟಾಪರ್ ಆಗಿದ್ದಾರೆ. ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಎ. ಭವಾನಿ ಅವರು ದತ್ತಿ ಬಹುಮಾನ ಸ್ವೀಕರಿಸಲಿದ್ದಾರೆ. ಡಾ. ಶೋಭಾ ಶಂಕರ್, ಡಾ. ಸುದೇವ್ ಹಾಜರಿದ್ದರು.

ತುಂಬಿದ ಮನೆಗೊಂದು ಚಂದದ ಸಾಪ್ತಾಹಿಕ
ತಪ್ಪದೇ ಓದಿ
ಕರ್ಮವೀರ
ಎಲ್ಲ ಬುಕ್‌ಸ್ಟಾಲ್‌ಗಳಲ್ಲಿ ಲಭ್ಯ

ಕಸ್ತೂರಿ
ಎಲ್ಲಾ ಅಂಗಡಿಗಳಲ್ಲಿ ಲಭ್ಯ!

**ಮಾನ್ಯ 3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ**

**ಆರ್.ಎ.ನಂ: 07/2024**

**ಮೇಲ್ಮನವಿದಾರರು:** ಶ್ರೀಮತಿ ಲಲಿತಮ್ಮ

**ವಿರುದ್ಧ**

**ಎದುರುದಾರರು:** ಶ್ರೀಮತಿ ವಿಜಯಲಕ್ಷ್ಮೀ ಮತ್ತು ಇತರರು

**ಐದನೇ ಎದುರುದಾರರ ಪೂರ್ಣ ವಿಳಾಸ:** ಮುರಳಿ ಕೃಷ್ಣ ಬಿನ್ ಲೇಟ್ ಮುನಿಯಪ್ಪ, ಸುಮಾರು 44 ವರ್ಷ, ವಾಸ: ಸಿ.ಹೆಚ್. 27, ಮಂಜುನಾಥ ನಿಲಯ, ಜಯನಗರ, 2ನೇ ತಿರುವು, ಶಿವಮೊಗ್ಗ-577201

**7ನೇ ಎದುರುದಾರರ ಪೂರ್ಣ ವಿಳಾಸ:** ಶ್ರೀಮತಿ ಗಂಗಮ್ಮ ಕೋಂ. ಅಂಜನಪ್ಪ ಬಿನ್ ಲೇಟ್ ಮುನಿಯಪ್ಪ 58 ವರ್ಷ ವಯಸ್ಸು, ವಾಸ: ನಂ. 2607, ವಾಲ್ಮೀಕಿ ರಸ್ತೆ, 2ನೇ ತಿರುವು, ವಿ.ವಿ. ಮೊಹಲ್ಲ, ಶ್ರೀರಾಮ ಕಲ್ಯಾಣ ಮಂದಿರ ಹಿಂಭಾಗ, ಮೈಸೂರು

**8ನೇ ಎದುರುದಾರರ ಪೂರ್ಣ ವಿಳಾಸ:** ಶ್ರೀಮತಿ ಗಾಯಿತ್ರಿ ಕೋಂ. ತಿಪ್ಪೇಸ್ವಾಮಿ ಬಿನ್ ಲೇಟ್ ಮುನಿಯಪ್ಪ, 38 ವರ್ಷ ವಯಸ್ಸು, ವಾಸ: C/o ಮಾಸ್ತರ್ ಕರಿಯಣ್ಣ ಬಿಲ್ಡಿಂಗ್, ಕೆ.ಇ.ಬಿ. ಹಿಂಭಾಗ, ಬನಶಂಕರಿ ಬಡಾವಣೆ, ಶಿರಾ ತಾಲ್ಲೂಕು, ತುಮಕೂರು ಜಿಲ್ಲೆ.

**ಪ್ರಕಟಣೆ ಕೃಪೆಗಾಗಿ**

ಮೇಲ್ಕಂಡ ಮೇಲ್ಮನವಿದಾರರಾದ ಶ್ರೀಮತಿ ಲಲಿತಮ್ಮ ಕೋಂ. ಲೇಟ್ ನಂದ್ಯನಾಯ್ಕ ಇವರು ಮಾನ್ಯ 1ನೇ ಹೆಚ್ಚುವರಿ ಹಿರಿಯ ವಿಭಾಗದ ಸಿವಿಲ್ ನ್ಯಾಯಾಲಯ ಮತ್ತು ಸಿಜೆಎಂ ಶಿವಮೊಗ್ಗ ಇಲ್ಲಿ ಅಸಲು ದಾವೆ ಸಂಖ್ಯೆ: 131/2019 ರಲ್ಲಿ ದಿ: 01-12-2023 ರಂದು ಆದ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಆರ್.ಎ.ನಂ. 07/2024 ನ್ನು ಮೇಲ್ಕಂ